SEPTEMBER 27, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ನವರಾತ್ರಿಯ ಆರನೇ ದಿನವಾದ ಇಂದು, ನಾಡಿನಾದ್ಯಂತ ದೇವಿ ಮಂದಿರಗಳಲ್ಲಿ, ಕಾತ್ಯಾಯಿನಿ ದೇವಿಗೆ, ಶ್ರದ್ಧಾ–ಭಕ್ತಿಯ ಪೂಜೆ, ವಿಶೇಷವಾಗಿ ಸಲ್ಲುತ್ತಿದೆ. 'ಕಾತ್ಯಾಯಿನಿ ದೇವಿಯ ಪೂಜೆಯಿಂದ, ಋಣಾತ್ಮಕ ಶಕ್ತಿಗಳ ನಿರ್ಮೂಲನೆಯಾಗಿ, ಆತ್ಮವಿಶ್ವಾಸ ಲಭಿಸುತ್ತದೆ' ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ.

<><><>

ಭಾರತ ನವೋದಯದ ಪಿತಾಮಹ, ಬ್ರಹ್ಮ ಸಮಾಜದ ಸ್ಥಾಪಕ, ಸಾಮಾಜಿಕ ಅನಿಷ್ಟಗಳಾದ ಸತಿಪದ್ಧತಿ, ಬಹುಪತ್ನಿತ್ವ, ಬಾಲ್ಯ ವಿವಾಹ ಹಾಗೂ ಅಸ್ಪೃಶ್ಯತೆಯ ನಿವಾರಣೆಗಾಗಿ ಹೋರಾಡಿದ, ರಾಜಾರಾಮ ಮೋಹನ್ ರಾಯ್ ಅವರ ಪುಣ್ಯಸ್ಮರಣೆ ಇಂದು,

<><><>

'ಸುಸ್ಥಿರ ಪರಿವರ್ತನೆಗಾಗಿ ಪ್ರವಾಸೋದ್ಯಮ' ಧ್ಯೇಯದೊಂದಿಗೆ, ಇಂದು, ವಿಶ್ವ ಪ್ರವಾಸೋದ್ಯಮ ದಿನಾಚರಣೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಶುಭಾಶಯ ಕೋರಿ, ಕರ್ನಾಟಕ ಹಲವು ಪ್ರವಾಸಿ ತಾಣಗಳ ಜಾಗತಿಕ ಕೇಂದ್ರ ಎಂದಿದ್ದಾರೆ.

<><><>

ಕೊಪ್ಪಳ ಜಿಲ್ಲೆ, ಐತಿಹಾಸಿಕ ಆನೆಗುಂದಿಯ, ಗಗನ ಮಹಲ್ ನಿಂದ, ಅಂಜನಾದ್ರಿ ಬೆಟ್ಟದ ವರೆಗೆ ಜರುಗಿದ, 'ಪ್ಲಾಸ್ಟಿಕ್ ಮುಕ್ತ ಪ್ರವಾಸೋದ್ಯಮ' ಧ್ಯೇಯದ ಓಟಕ್ಕೆ, ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಹಾಗೂ ವೇದಿಕೆ ಕಾರ್ಯಕ್ರಮಕ್ಕೆ, ಶಾಸಕ ಗಾಲಿ ಜನಾರ್ಧನ ರೆಡ್ಡಿ ಚಾಲನೆ ನೀಡಿದರು.

<><><>

ಸ್ವಚ್ಛತೆಯೇ ಸೇವೆ; ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ಸೇವಾ ಪರ್ವ ಹಾಗೂ 'ಸ್ವಚ್ಛತಾ ಹೀ ಸೇವಾ' – 2025, ಪಾಕ್ಷಿಕದ ಅಂಗವಾಗಿ, "ಏಕ್ ದಿನ್, ಏಕ್ ಘಂಟಾ, ಏಕ್ ಸಾಥ್'" ಶ್ರಮದಾನ ಕಾರ್ಯಕ್ರಮ, ಗದಗ ಜಿಲ್ಲೆಯ, ಸಹಕಾರ ಸಂಘದ ಸಭಾಭವನದಲ್ಲಿ ಜರುಗಿತು. ಗದಗ ಜಿಲ್ಲೆ, ಸಹಕಾರ ಸಂಘ ಹಾಗೂ ಬ್ಯಾಂಕ್‌ಗಳ ಆಶ್ರಯದಲ್ಲಿ ಜರುಗಿದ, ಸ್ವಚ್ಛತಾ ಹೀ ಸೇವಾ ಅಭಿಯಾನಕ್ಕೆ, ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ ನಿರ್ದೇಶಕ, ಎಚ್.ಈ. ಹಿರೇಗೌಡ್ರ ಚಾಲನೆ ನೀಡಿದರು.

<><><>

ಕೊಪ್ಪಳ ಜಿಲ್ಲೆಯಲ್ಲಿ ಆಯೋಜಿತ, 'ಒಂದು ದಿನ, ಒಂದು ಗಂಟೆ, ಜೊತೆಗೂಡಿ ಸ್ವಚ್ಛತೆ' ಧ್ಯೇಯದ, ಸ್ವಚ್ಛತಾ ಪಾಕ್ಷಿಕ ಅಭಿಯಾನದಲ್ಲಿ ಪಾಲ್ಗೊಂಡಿದ್ದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ ಅರಸಿದ್ದಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಎಸ್.ಪಿ. ರಾಮ ಅರಸಿದ್ದಿ ಧ್ವನಿ 24 ಸೆಕೆಂದುಗಳು

<><><>

ಬೀದರ ಜಿಲ್ಲೆ, ಬಸವಕಲ್ಯಾಣದಲ್ಲಿ ಆಯೋಜಿಸಿದ್ದ, 'ಆತ್ಮನಿರ್ಭರ ಭಾರತ; ಸರಕು ಮತ್ತು ಸೇವಾ ತೆರಿಗೆ,' ಕುರಿತು, ವೃತ್ತಿಪರರ, ಪ್ರಭುದ್ಧರ ಸಭೆಯಲ್ಲಿ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಪಾಲ್ಗೊಂಡಿದ್ದರು. ನೆಕ್ಸ್ಟ್ ಜೆನ್ ಜಿ.ಎಸ್.ಟಿ. – 2.೦ ರಾಷ್ಟ್ರದ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲು. ಇದು ಕೇವಲ ನೀತಿಯ ಹೊಂದಾಣಿಕೆಯಲ್ಲ; ಮೋದಿ ಸರ್ಕಾರದ ಒಂದು ದಶಕದ ನಿರಂತರ, ಸ್ಥಿರ ಮತ್ತು ದೂರದೃಷ್ಟಿಯ ಆರ್ಥಿಕ ನಿರ್ವಹಣೆಯ ಪರಿಣಾಮ, ಎಂದು, ಸಚಿವ ಜೋಶಿ ನುಡಿದರು.

<><><>

ಚಿಕ್ಕಮಗಳೂರು ಜಿಲ್ಲೆ, ಎಮ್ಮೆದೊಡ್ಡಿ ಗ್ರಾಮ ಪಂಚಾಯಿತಿ ಹಾಗೂ ಧಾರವಾಡ ತಾಲೂಕು, ಕಾಗವಾಡ ಗ್ರಾಮದಲ್ಲಿ ಜರುಗಿದ ಕೇಂದ್ರ ಪುರಸ್ಕೃತ ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನದಲ್ಲಿ, ಪ್ರಧಾನಮಂತ್ರಿ ಜನ ಧನ್ ಯೋಜನೆ, ಅಟಲ್ ಪಿಂಚಣಿ ಯೋಜನೆ, ಸಾಮಾಜಿಕ ಭದ್ರತೆಯ ವಿಮೆ ಯೋಜನೆಗಳಡಿ, ಅರ್ಹರನ್ನು ನೋಂದಾಯಿಸಲಾಗಿದೆ.

<><><>

'ಸ್ವದೇಶಿ ಜಾಗೃತಿ ಅಭಿಯಾನ'ದ ಹಿನ್ನೆಲೆ, ವಿಜಯಪುರದ, ಕಾಮಧೇನು ಸ್ವದೇಶಿ ಭಂಡಾರಕ್ಕೆ ಭೇಟಿ ನೀಡಿದ, ಸಂಸದ ರಮೇಶ ಜಿಗಜಿಣಗಿ, ಶಾಸಕ ಹಣಮಂತ ನಿರಾಣಿ ಹಾಗೂ ಗಣ್ಯರು, ಸ್ವದೇಶಿ ವಸ್ತುಗಳನ್ನು ಖರೀದಿಸಿ, ಭಾರತ ಸ್ವಾವಲಂಬಿ ಮತ್ತು ಸುದೃಢ ರಾಷ್ಟ್ರವಾಗಲು, ಸ್ವದೇಶಿ ವಸ್ತುಗಳನ್ನೇ ಬಳಸಬೇಕು ಎಂದರು.

<><><>

ನೆರೆಯ ಮಹಾರಾಷ್ಟ್ರ ರಾಜ್ಯದ ವಿವಿಧ ಜಲಾಶಯಗಳಿಂದ, ಅಪಾರ ಪ್ರಮಾಣದ ನೀರು, ರಾಜ್ಯಕ್ಕೆ ಹರಿದು ಬಂದಿದೆ. ಭೀಮಾ ನದಿ ಪಾತ್ರದ, ದೇವಣಗಾವ ಗಾಣಗಾಪುರ, ಸೊನ್ನ ಬ್ರಿಡ್ಜ್ ಕಮ್ ಬ್ಯಾರೇಜ್ ನಲ್ಲಿ, ಪ್ರವಾಹ ಭೀತಿ ಎದುರಾಗಿದೆ. ನದಿ ಪಾತ್ರದಲ್ಲಿ ಮುಂಜಾಗ್ರತೆ ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ನೈಸರ್ಗಿಕ ವಿಕೋಪ ನಿರ್ವಹಣೆ ತುರ್ತು ಕಾರ್ಯಪಡೆಗಳ, ರಾಷ್ಟ್ರ ಹಾಗೂ ರಾಜ್ಯದ ತಂಡಗಳನ್ನು ಮುಂಜಾಗ್ರತಾ ಕ್ರಮವಾಗಿ, ನಿಯೋಜಿಸಲಾಗಿದೆ. ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ, ಪ್ರಿಯಾಂಕ ಖರ್ಗೆ, ಯಾತ್ರಿ ನಿವಾಸ ಕಾಳಜಿ ಕೇಂದ್ರ ಹಾಗೂ ಚೌಡಾಪುರ, ಮಲ್ಲಾಬಾದ ಹಾಗೂ ಅಫಜಲಪೂರ ಗ್ರಾಮದಲ್ಲಿ, ಮಳೆ ಹಾಗೂ ಪ್ರವಾಹದಿಂದ ಬೆಳೆ ಹಾನಿಗೊಳಗಾದ, ಪ್ರದೇಶಕ್ಕೆ ತೆರಳಿ, ವೀಕ್ಷಿಸಿದರು.

<><><>

ನಾಳೆ, ಭಾನುವಾರ, ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಆಕಾಶವಾಣಿಯ 'ಮನ್ ಕೀ ಬಾತ್' ನ, 126ನೇ ಆವೃತ್ತಿಯಲ್ಲಿ, ಭಾರತೀಯರನ್ನುದ್ದೇಶಿಸಿ, ಮಾತನಾಡಲಿದ್ದಾರೆ.

<><><>

ನಾಳೆ, 28ನೇ ತಾರೀಖು, 'ವಿಶ್ವ ರೇಬಿಸ್ ಜಾಗ್ರತಿ ದಿನಾಚರಣೆ'. 'ನೀವು, ನಾವು ಹಾಗೂ ಸಮುದಾಯ ಈಗಲೇ ಕಾರ್ಯಪ್ರವೃತ್ತರಾಗೋಣ, ಧ್ಯೇಯದೊಂದಿಗೆ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ, ರಾಜ್ಯಾದ್ಯಂತ ಉಚಿತ ರೇಬಿಸ್ ಲಸಿಕೆ ಅಭಿಯಾನ ಆಯೋಜಿಸಿದೆ.

ಹರ್ಷ/ಹೊಂಗಲ್/ಕ.ವಾ.ಇ.ಬೆಂ.

<><><>

ಕಲಬುರಗಿ ಜಿಲ್ಲೆಗೆ ಇಂದು, ಆರೇಂಜ್ ಅಲರ್ಟ್, ಪ್ರಕಟಿಸಲಾಗಿದೆ. ಸತತ ಮಳೆಗೆ ಯಾದಗಿರಿ ಜಿಲ್ಲೆಯಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ರಾಜ್ಯದ ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಇಂದು ಭಾರಿ ಮಳೆ, ಕರಾವಳಿ, ಮಲೆನಾಡು ಮತ್ತು ರಾಜ್ಯದ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮುನ್ಸೂಚನೆ ನೀಡಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>